## 12

# ಅತ್ಯುನ್ನತ ಗೌರವದ ಸಭೆ

*“ಆದರೆ ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವ ಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿ ಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ” (ಇಬ್ರಿಯ 12:22-24).*

ನೀನು ಸ್ವೀಕರಿಸಬಹುದಾದ ಅತೀ ಶ್ರೇಷ್ಠ ಗೌರವಾರ್ಪಣೆಯ ಬಗ್ಗೆ, ನೀನು ಬಹಳವಾಗಿ ಮೆಚ್ಚಿಕೆಯಿಂದ ಇಟ್ಟುಕೊಳ್ಳಬಹುದಾದ ಉನ್ನತ ಸ್ಥಾನವು ಯಾವುದೆಂದು ನೀನು ತಿಳಿದುಕೊಳ್ಳುವಿ? ನಿನ್ನ ಪಾಂಡಿತ್ಯದ ಸಾಧನೆಯೇ? ತಕ್ಷಣವೇ ಐಶ್ವರ್ಯವಂತರ ವೃತ್ತದೊಳಗೆ ಪ್ರವೇಶವೋ? ಆಶ್ಚರ್ಯಕರವಾದ ಪಂದ್ಯಾಟದ ಸಾಧನೆಯೋ? ಮಾನವ ಸೇವೆಯ ಗೌರವವೋ? ನಿನ್ನ ಕುಟುಂಬದೊಂದಿಗೆ ಸ್ಥಿರವಾದ ಯಶಸ್ಸೋ?

ನಾನು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ನಾನು ವಾಸವಾಗಿದ್ದ ಡೊರ್ಮಿಟರಿಯ ಅದೇ ಅಂತಸ್ತಿನಲ್ಲಿ ವಾಸಿಸಿದ್ದ ಹಲವಾರು ಯುವಕರು ಪ್ರತೀ ಸಾಯಂಕಾಲ ಪರಿಶುದ್ಧ ಬರಹವನ್ನು ಓದಲು ಮತ್ತು ಪ್ರಾರ್ಥಿಸಲು ಕೂಡಿಬರುತ್ತಿದ್ದರು. ಆಗಾಗ, ನಾವು ನಮ್ಮ ಆಶೀರ್ವಾದಗಳನ್ನು ಎಣಿಸುತ್ತಿದ್ದೆವು ಇಲ್ಲವೇ ಪ್ರತಿಯೊಬ್ಬ ಯುವಕನಿಗೆ ತನ್ನ ವಿಚಾರಗಳನ್ನು ಹಂಚಿಕೊಳ್ಳಲಿಕ್ಕೆ ಅವಕಾಶ ಕೊಡುತ್ತಿದ್ದೆವು. ಒಂದು ಸಾಯಂಕಾಲ ನಮ್ಮ ಧ್ಯಾನವನ್ನು ನಡಿಸಿದ ಯುವಕನು, “ಬೈಬಲಿನಲ್ಲಿಯ ಯಾವ ವ್ಯಕ್ತಿಯಂತೆ ಇರಲು ಅತಿ ಹೆಚ್ಚಾಗಿ ನೀವು ಬಯಸುತ್ತೀರಿ?” ಎಂದು ಪ್ರಶ್ನಿಸಿದನು, “ನಾನು ಅಬ್ರಹಾಮನಂತೆ ಇರಲು ಬಯಸುತ್ತೇನೆ, ಯಾಕಂದರೆ ಅವನು ದೊಡ್ಡ ನಂಬಿಕೆಯ ಮನುಷ್ಯನಾಗಿದ್ದನು” ಎಂದು ಹೇಳಿದನು. ಇನ್ನೊಬ್ಬನು, “ನಾನು ಮೋಶೆಯಂತಿರಲು ಬಯಸುತ್ತೇನೆ, ಯಾಕಂದರೆ ಅವನು ದೇವರನ್ನು ನೋಡಿದನು” ಎಂದು ಹೇಳಿದನು. ಮತ್ತೊಬ್ಬನು, “ನಾನು ಅಪೊಸ್ತಲರಲ್ಲಿ ಒಬ್ಬನಂತೆ ಇರಲು ಬಯಸುತ್ತೇನೆ, ಯಾಕಂದರೆ ಅವರು ಯೇಸುವಿನೊಂದಿಗೆ ಇದ್ದರು” ಎಂದು ಹೇಳಿದನು. ಇನ್ನೂ ಮತ್ತೊಬ್ಬನು, “ನಾನು ಹನೋಕನಂತೆ ಇರಲು ಬಯಸುತ್ತೇನೆ, ಯಾಕಂದರೆ ಅವನು ದೇವರೊಂದಿಗೆ ನಡೆದನು” ಎಂದು ಹೇಳಿದನು. ಪ್ರತಿಯೊಬ್ಬ ಯುವಕನು ಬೈಬಲಿನಲ್ಲಿ ವಿಶೇಷ ಗುಣಲಕ್ಷಣವನ್ನು ಪ್ರದರ್ಶಿಸಿದ ಇಲ್ಲವೇ ವಿಶಿಷ್ಠ ಗೌರವ ಪಡೆದುಕೊಂಡ ಒಬ್ಬನನ್ನು ಆಯ್ದುಕೊಂಡನು ಮತ್ತು ಆ ಮನುಷ್ಯನ ಅನುಭವಗಳನ್ನು ತಾನು ಹಂಚ್ಚಿ ಕೊಂಡರೆ, ತಾನು ಅದನ್ನು ಎಲ್ಲಾ ಅವಕಾಶಗಳಿಗಿಂತ ಅತಿ ದೊಡ್ಡದಾಗಿದೆಯೆಂದು ಎಣಿಸುವೆನೆಂದು ಹೇಳಿದನು.

ಯಾವಾಗಲು ಬೇರೊಬ್ಬರ ಮೆಚ್ಚಿಕೆಯ ಸಮಯದ ಕಡೆಗೆ ಅಪೇಕ್ಷೆಯಿಂದ ನೋಡುವುದು ಮತ್ತು ನಮಗೆ ಕೊಡಲ್ಪಟ್ಟ ವಿಶೇಷ ಅವಕಾಶಗಳನ್ನು ಕಡೆಗಣಿಸುವುದು ಸುಲಭವಾಗಿದೆ ಎಂದು ನಾನು ತಿಳಿಯುತ್ತೇನೆ. ಕ್ರೈಸ್ತರಾದ ನಾವು ನಮ್ಮ ಉನ್ನತ ಸ್ಥಾನವನ್ನು ಹಾಗೂ ಕ್ರಿಸ್ತನಲ್ಲಿಯ ಶ್ರೇಷ್ಠ ಸ್ವಾಸ್ಥ್ಯವನ್ನು ಸತತವಾಗಿ ಮನಸ್ಸಿನಲ್ಲಿಟ್ಟುಕೊಳ್ಳವ ಅಗತ್ಯತೆಯಿದೆ. ಇಬ್ರಿಯ 12:22-24, ಹೊಸ ಒಡಂಬಡಿಕೆಯ ದೊಡ್ಡ ಜ್ಞಾಪಿಸುವಿಕೆಗಳಲ್ಲಿ ಒಂದಾಗಿದೆ. ಕ್ರೈಸ್ತರು ಕ್ರಿಸ್ತನ ಬಳಿಗೆ ತಮ್ಮ ಬರುವಿಕೆಯಲ್ಲಿ ಹೊಂದಿಕೊಂಡ ಕೆಲವು ಅಮೂಲ್ಯ ನಿಧಿಗಳನ್ನು ಅದು ಸಂಕ್ಷೇಪಿಸಿ ಹೇಳುತ್ತದೆ.

> ಆದರೆ ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವ ಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ.

ಬರಹಗಾರನು ಈ ವಾಕ್ಯಭಾಗವನ್ನು ತನ್ನ ವಾಚಕರು ಕ್ರಿಸ್ತನ ಕಡೆಗೆ ಮತ್ತು ಕ್ರೈಸ್ತತ್ವದ ಕಡೆಗೆ ಮಾರ್ಪಟ್ಟಿದ್ದರ ಉಲ್ಲೇಖದೊಂದಿಗೆ ಪ್ರಾರಂಭಿಸುತ್ತಾನೆ. "ನೀವು ಬಂದಿರುವಿರಿ" ಎಂಬುದು ಅವರು ಕ್ರೈಸ್ತತ್ವವನ್ನು ಅಪ್ಪಿಕೊಂಡ ಸಮಯಕ್ಕಾಗಿ ರೂಪಕಾಲಂಕಾರಿಕ ಭಾಷೆಯಾಗಿದೆ. ಆಗ ಅವನು ಕ್ರೈಸ್ತರಿಗೆ ಕೊಡಲ್ಪಟ್ಟ ಹನ್ನೆರಡು ವಿಶಿಷ್ಟವಾದ ಆತ್ಮಿಕ ಲಾಭಗಳನ್ನು ಯಾದಿ ಮಾಡುತ್ತಾನೆ. "ಚೊಚ್ಚಲ ಮಕ್ಕಳ ಸಭೆ" ಎಂಬ ಮಾತಿನಿಂದ ಈ ಲಾಭಗಳಲ್ಲಿ ಒಂದನ್ನು ವಿವರಿಸಿದ್ದಾನೆ, ಭಾಷಾಂತರಿಸಲ್ಪಟ್ಟ ಗ್ರೀಕ ನಾಮಪದ "ಚೊಚ್ಚಲ ಮಕ್ಕಳು" ಎಂಬುದು ಬಹುವಚನದಲ್ಲಿದೆ. ಮತ್ತು ಅದರೊಂದಿಗೆ ಸಂಬಂಧದಲ್ಲಿ ಉಪಯೋಗಿಸಿದ ಗ್ರೀಕ ಕ್ರಿಯಾಪದವು ಬಹುವಚನದಲ್ಲಿದೆ; ಹೀಗೆ "ಚೊಚ್ಚಲ ಮಕ್ಕಳ ಸಭೆ" ಯಂತೆ ನಿಜವಾಗಿಯೂ ಅವನು ಕ್ರೈಸ್ತರಿಗೆ ಸಂಬಂಧಿಸಿ ಹೇಳಿದನು. ಈ ವಿವರಣಾತ್ಮಕ ಮಾತು ಹೊಸ ಒಡಂಬಡಕೆಯಲ್ಲೆಲ್ಲಾ ಒಂದೇ ಸಲ ಕಂಡು ಬರುವಂಥದ್ದು, ಕ್ರೈಸ್ತನು ಕ್ರಿಸ್ತನ ಸಭೆಯಂತೆ ಅವನಾಗಲೀ ಇಲ್ಲವೇ ಅವಳಾಗಲೀ ಜೀವಿಸುವುದಕ್ಕೆ ವಿಶೇಷ ಅಂತಸ್ತು ಕೊಡಲ್ಪಟ್ಟದ್ದನ್ನು ವ್ಯಕ್ತಪಡಿಸುತ್ತದೆ.

## ಸತ್ಯ

ಇಬ್ರಿಯರಿಗೆ ಬರೆದ ಪತ್ರಿಕೆಯು ನಿರಾಶೆಗೊಂಡ ಹಾಗೂ ಕ್ರಿಸ್ತನಲ್ಲಿಯ ನಂಬಿಕೆಯಿಂದ ಬಿದ್ದುಹೋಗುವುದರಲ್ಲಿದ್ದ ಯೆಹೂದಿ ಕ್ರೈಸ್ತರಿಗೆ ಬರೆಯಲ್ಪಟ್ಟಿತು. ಅವರನ್ನು ಸುತ್ತುವರಿದ ಹಿಂಸೆಗಳು ಮತ್ತು ಅನ್ಯಜನರ ಒತ್ತಡಗಳು ಅವರ ಕ್ರೈಸ್ತ ಪ್ರಮಾಣದ ಪ್ರತಿಯೊಂದು ಹೆಜ್ಜೆಯಲ್ಲಿ ನೋವುಕೊಡುವ ಮುಳ್ಳುಗಳಂತೆ ಇದ್ದವು. ಕೆರಳಿಸುವಿಕೆಯಲ್ಲಿ, ಅನೇಕರು ಈ ತಡೆಯಿಲ್ಲದ ಪೀಡಿಸುವಿಕೆಯಿಂದ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ತಾವು ಮಾರ್ಪಾಟುಗೊಂಡಂಥ ಯೆಹೂದಿ ಧರ್ಮಕ್ಕೆ ಹಿಂದಿರುಗಿ ಹೋಗಲು ಶೋಧಿಸಲ್ಪಟ್ಟರು.

ಪತ್ರಿಕೆಯಲ್ಲೆಲ್ಲಾ, ಪ್ರೇರೇಪಿತ ಬರಹಗಾರನು ತನ್ನ ವಾಚಕರಿಗೆ ಕ್ರೈಸ್ತತ್ವವನ್ನು ಉತ್ಕೃಷ್ಟ ಅವಕಾಶವೆಂದೂ ಮತ್ತು ಮಾನವನಿಗೆ ದೇವರು ಕೊಟ್ಟ ಅತ್ಯಂತ ಸುಂದರವಾದ ಆಶೀರ್ವಾದವೆಂದೂ ಯಾಕೆ ಬೆಲೆಕೊಡಬೇಕೆಂದು ವಿವಿಧ ಕಾರಣಗಳನ್ನು

ಕೊಟ್ಟನು. ಕ್ರಿಸ್ತನಿಗೆ ಬೆನ್ನುಹಾಕಿ ಯೆಹೂದಿ ಧರ್ಮಕ್ಕೆ ಹಿಂದರುಗಿ ಹೋಗುವುದು ಶ್ರೇಷ್ಠವಾದದ್ದಕ್ಕೆ ಕನಿಷ್ಠವಾದದ್ದನ್ನು, ಪುಸ್ತಕದ ಅಂತಿಮ ತೀರ್ಪಾಗಿರುತ್ತದೆ. ಇಬ್ರಿಯ 12:22-24ರಲ್ಲಿ, ಅವನು ಕ್ರಿಸ್ತನಲ್ಲಿ ಕ್ರೈಸ್ತನು ಅನುಭವಿಸುವ ಪ್ರಮುಖ ಲಾಭಗಳನ್ನು ಒಂದು ವಾಕ್ಯದಲ್ಲಿ ಕ್ರೋಢೀಕರಿಸಿದ್ದಾನೆ. ಯಾವುದೇ ಕ್ರೈಸ್ತನು ಯಾವುದೇ ಇತರ ಧರ್ಮಕ್ಕಾಗಿ ಎಂದೂ ಬದಲಾಯಿಸಬಾರದು ಎಂದು ಮನವೊಲಿಸುವುವದಕ್ಕೆ ಸಾಕಷ್ಟು ಪುರಾವೆಯನ್ನು ಒಂದೇ ಹೊಡೆತದಲ್ಲಿ ಕೊಟ್ಟನು.

ಹಳೇ ಒಡಂಬಡಿಕೆಯ ಸಮಯಗಳಲ್ಲಿ ದೇವರ ಜನಾಂಗವು ಸಿನಾಯಿ ಬೆಟ್ಟಕ್ಕೆ ಬಂದಿತು, ಅಲ್ಲ ಧರ್ಮಶಾಸ್ತ್ರವು ಕೊಡಲ್ಪಟ್ಟಿತು. ಅದರ ಬೆಂಕಿ ಹೊಗೆ, ಗುಡುಗು ಮತ್ತು ಮಿಂಚುಗಳು ಪಾಪವನ್ನು ಕುರಿತು ದೇವರ ನೀತಿಯನ್ನೂ ನ್ಯಾಯವನ್ನೂ ಪ್ರಕಟಿಸಿದವು. ಇದಕ್ಕೆ ವ್ಯತಿರಿಕ್ತವಾಗಿ, ಕ್ರೈಸ್ತರು ಚೀಯೋನ ಪರ್ವತಕ್ಕೆ, ಜೀವಿಸುವ ದೇವರ ಬೆಟ್ಟಕ್ಕೆ, ಪರಲೋಕದ ಯೆರೂಸಲೇಮಿಗೆ ಬರುವರು. ಅವರು ಕ್ರೈಸ್ತ ಯುಗದಲ್ಲಿ, ಕೃಪೆಯ ಯುಗದಲ್ಲಿ, ದೇವರ ಬಳಿಗೆ ಬಂದಿರುವರು ಮತ್ತು ಅವರು ಪಾರಲೌಕಿಕ ಯೆರೂಸಲೇಮಿನಲ್ಲಿ ಆತ್ಮಿಕವಾಗಿ ಭಾಗವಹಿಸುವರು. ಅವರು ಹಾಗೆ ಮಾಡುವಾಗ, ಅವರು ದೇವರ ಸನ್ನಿಧಿಯಲ್ಲಿ ಆನಂದಪಡುತ್ತ, ಸ್ತೋತ್ರಗೀತೆಗಳನ್ನು ಹಾಡುತ್ತಿರುವ ದೇವದೂತರ ಗುಣಗಳೊಂದಿಗೆ ಅನ್ಯೋನ್ಯತೆಯಲ್ಲಿ ಪ್ರವೇಶಿಸುವರು. ಪರಲೋಕದಲ್ಲಿ ತಮ್ಮ ಹೆಸರುಗಳು ಬರೆಯಲ್ಪಟ್ಟ ಚೊಚ್ಚಲ ಮಕ್ಕಳ ಸಭೆಯಲ್ಲಿ ಅವರು ಪ್ರವೇಶಿಸಿದರು, ಮತ್ತು ಈಗ ಪರಿಪೂರ್ಣವಾಗಿ ಮಾಡಲ್ಪಟ್ಟ ಆತ್ಮಗಳನ್ನು, ಹಳೇ ಒಡಂಬಡಿಕೆಯ ಯುಗದ ನೀತಿವಂತ ಪರಿಶುದ್ಧರೊಂದಿಗೆ ಅವರು ಕೂಡಿಸಲ್ಪಟ್ಟಿರುವರು. ಆತನ ಯಜ್ಞದ ರಕ್ತದಿಂದ, ಅವರು ಯೇಸುವಿನ ಬಳಿಗೆ, ಹೊಸ ಒಡಂಬಡಿಕೆಯ ಮಧ್ಯಸ್ಥಗಾರನ ಬಳಿಗೆ ಬಂದಿರುವರು. ಸ್ವಲ್ಪದರಲ್ಲಿ, ಯೇಸುವಿನ ಆಮಂತ್ರಣವನ್ನು ಸ್ವೀಕರಿಸುವುದರೊಂದಿಗೆ ಅವರು ಜಗತ್ತಿನ ರಕ್ಷಣೆಗಾಗಿ ದೇವರ ಯೋಜನೆಯ ಅಂತಿಮ ನೆರವೇರುವಿಕೆಯಲ್ಲಿ ಭಾಗವಹಿಸಿದ್ದಾರೆ ಎಂದು ಹೇಳಬಹುದು.

ಆದುದರಿಂದ, ಕ್ರೈಸ್ತರು ಕ್ರೈಸ್ತ ಯುಗಕ್ಕೆ ಅದ್ವಿತೀಯವಾಗಿರುವ ಪಾರಲೌಕಿಕ ವರಗಳನ್ನು ಹೊಂದಿಕೊಂಡಿರುವರು. ಕೃಪೆಯ ಬದಲು ನಿಯಮವನ್ನು ಹಾಗೂ ದಯೆಯ ಬದಲು ನ್ಯಾಯವನ್ನು ಒತ್ತಿಹೇಳಿದ ಮೋಶೆಯ ಧರ್ಮಶಾಸ್ತ್ರದ ಕೆಳಗೆ ಅವರು ಇರುವುದಿಲ್ಲ. ಅವರು ಪಾರಲೌಕಿಕ ಯೆರೂಸಲೇಮಿನಲ್ಲಿ ಪಾಲುಗಾರರಾಗುವರು. ಅದು ಪಾರಲೌಕಿಕ ಜಗತ್ತನ್ನೂ ಹಾಗೆಯೇ ನಮ್ಮ ಭೂಲೋಕವನ್ನೂ ಒಳಗೊಂಡಿರುವ ದೇವರ ಆಳ್ವಿಕೆಯಾಗಿರುವುದು. ಅವರು ತಮ್ಮ ಆರಾಧನೆ ಸ್ತೋತ್ರ ಮತ್ತು ದೇವರ ಪ್ರೀತಿ ಯಲ್ಲಿ, ಅವರು ಉನ್ನತ ಜೀವಿಗಳಾದ ಅಗಣಿತ ದೇವದೂತರೊಂದಿಗೆ ಕೂಡಿಕೊಳ್ಳುವರು, ಅವರು ಆರಾಧನೆಯಲ್ಲಿ ಮತ್ತು ಸೇವೆಯಲ್ಲಿ ದೇವ ಚಿತ್ತವನ್ನು ಎಡೆಬಿಡದೇ ಮಾಡುವರು. ಕ್ರೈಸ್ತರು ಚೊಚ್ಚಲಾಗಿ ಜನಿಸಿದವರ, ಬಹಳವಾಗಿ ಮೆಚ್ಚಿಕೆ ಹೊಂದಿದವರ ಸಭೆಯೊಳಗೆ ಬಂದಿರುವರು, ಮತ್ತು ಅವರ ಭಾಗವಾಗಿ ಜೀವಿಸುವರು. ಈಗ ನಿತ್ಯತ್ವದಲ್ಲಿರುವ ಹಳೇ ಒಡಂಬಡಿಕೆಯ ಕಾಲದ ನೀತಿವಂತರ ಆತ್ಮಗಳೊಂದಿಗೆ ಅವರು ಕೂಡಿಕೊಂಡಿರುವರು. ಯೇಸುವಿನ ರಕ್ತದ ಮುಖಾಂತರ, ಕೃಪೆಯಿಂದ ಕೊಡಲ್ಪಟ್ಟ ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನ ಮುಖಾಂತರ ದೇವರ ಕಡೆಗೆ ಅವರು ಬಂದಿರುವರು.

ಆಶೀರ್ವಾದಗಳ ಈ ಪಟ್ಟಿಯಲ್ಲಿ ನಮಗೆ ನಿರ್ದಿಷ್ಟವಾದ ಆಸಕ್ತಿಯು "ಚೊಚ್ಚಲ ಮಕ್ಕಳ ಸಭೆಗೆ" ಉಲ್ಲೇಖವಾಗಿರುತ್ತದೆ. "ಚೊಚ್ಚಲಾಗಿ ಹುಟ್ಟಿದವರು" ಎಂಬ ಪದವು ಅಸಮಾನ್ಯವಾಗಿ ಮಹತ್ವವುಳ್ಳದ್ದಾಗಿದೆ. ಯಾಕಂದರೆ ಅದರ ಅತ್ಯುನ್ನತ ಗೌರವವನ್ನು ಸೂಚಿಸುತ್ತದೆ. ಹಳೇ ಒಡಂಬಡಿಕೆಯಲ್ಲಿ ಪದವು ಅದರೊಂದಿಗೆ *ಅಪೇಕ್ಷಿತ*

ಗೌರವವನ್ನು ಒಳಗೊಂಡಿರುತ್ತದೆ ಚೊಚ್ಚಲ ಮಗನು ಕುಟುಂಬದ ಮಕ್ಕಳಲ್ಲಿ ಇಮ್ಮಡಿ ಗೌರವವನ್ನು ಹೊಂದಿಕೊಳ್ಳುವದರಿಂದ, ಅದು ಪ್ರಾಧಾನ್ಯತೆಯ ಗೌರವ ಎಂದರ್ಥ ವಾಗುತ್ತದೆ. ಪದವು *ಸ್ಥಾನದ* ಗೌರವವನ್ನೂ ಸಹ ಸೂಚಿಸುತ್ತದೆ, ಯಾಕಂದರೆ ಒಬ್ಬನಿಗೆ ಅವನ ಶ್ರೇಷ್ಠತೆ ಇಲ್ಲವೇ ಗುಣಲಕ್ಷಣದ ಕಾರಣದಿಂದ ಕೊಡಲ್ಪಟ್ಟ ಗೌರವಕ್ಕೆ ಸಂಬಂಧಿಸಿರುತ್ತದೆ.

---

*ಕುರಿಮರಿಯಾದಾತನ ಜೀವಬಾಧ್ಯರ*
*ಪುಸ್ತಕದಲ್ಲಿ ಹೆಸರು ಬರೆಯಿಸಿಕೊಳ್ಳುವುದು*
*ಬೇರೆ ಯಾವುದೇ ಗೌರವನ್ನು ಹೊಂದಿಕೊಳ್ಳು*
*ವುದರಿಂದ ಆಗುವ ಆನಂದಕ್ಕಿಂತ ಹೆಚ್ಚಿನದಾಗಿರಬೇಕು.*

---

ಯೇಸುವು ಪರಿಶುದ್ಧ ಬರಹಗಳಲ್ಲಿ ಎರಡು ಕಾರಣಗಳಿಂದ ಜ್ಯೇಷ್ಠ ಪುತ್ರನಂತೆ ಕರೆಯಲ್ಪಟ್ಟಿದ್ದಾನೆ. ಮೊದಲನೆಯದು, *ಪ್ರಾಧಾನ್ಯತೆಯಲ್ಲಿ* ಆತನು ಜ್ಯೇಷ್ಠ ಪುತ್ರನಾಗಿದ್ದಾನೆ, ಯಾಕಂದರೆ ಆತನು ಸತ್ತವರೊಳಗಿಂದ ತನ್ನ ಪುನರುತ್ಥಾನದಲ್ಲಿ ನಮಗಿಂತ ಮೊದಲಿನವನಾಗಿದ್ದಾನೆ. “ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿ ಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು” (ಕೊಲೊಸ್ಸೆ 1:18) ಎಂದು ಪೌಲನು ಬರೆದನು. ಎರಡನೆಯದು, *ಸ್ಥಾನದಲ್ಲಿ* ಆತನು ಮೊದಲಾಗಿ ಹುಟ್ಟಿದವನಾಗಿದ್ದಾನೆ ಎಲ್ಲಾ ಸಂಗತಿಗಳ ಮೇಲೆ ಆತನಿಗೆ ಪ್ರಥಮ ಸ್ಥಾನವನ್ನು ಕೊಡುವುದರಿಂದ ದೇವರು ಆತನನ್ನು ಉನ್ನತ ಸ್ಥಿತಿಗೆ ಏರಿಸಿದ್ದಾನೆ. “ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠ ಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ” (ಕೊಲೊಸ್ಸೆ 1:15; ಹೋಲಿಸು ಇಬ್ರಿಯ 1:6) ಎಂದೂ ಪೌಲನು ಬರೆದನು. ಈ ವಚನದಲ್ಲಿ ಪ್ರಾಧಾನ್ಯತೆಯಲ್ಲಿ ಆತನು ಚೊಚ್ಚಲ ಮಗನಾಗಿರುವುದಿಲ್ಲ, ಯಾಕಂದರೆ ತಂದೆಯಾದ ದೇವರಂತೆ, ಆತನು ಸೃಷ್ಟಿಸಲ್ಪಟ್ಟ ಜೀವಿಯಲ್ಲ, ಆತನಿಗೆ ಅಂತ್ಯವಿಲ್ಲದ ಜೀವವಿರುತ್ತದೆ, ತಲತಲಾಂತರದಿಂದ ಅಸ್ತಿತ್ವದಲ್ಲಿದ್ದಾತನಾಗಿದ್ದಾನೆ. ಈ ವಚನವು ಆತನನ್ನು ಶ್ರೇಷ್ಠವಾದ ಸ್ಥಾನದಲ್ಲಿ ಚೊಚ್ಚಲಾದಾತನು, ಸೃಷ್ಟಿಸಲ್ಪಟ್ಟ ಜಗತ್ತಿನ *ಒಡೆಯನಾಗಿರುವಾತನು* ಎಂಬುದನ್ನು ತೋರಿಸುತ್ತದೆ.

ಯೇಸುವಿನೊಂದಿಗೆ ಸಂಬಂಧದಲ್ಲಿ ಅದರ ಉಪಯೋಗದಂತೆ, “ಚೊಚ್ಚಲಾಗಿ ಹುಟ್ಟಿದವನು” ಎಂಬ ಮಾತು ಶ್ರೇಷ್ಠತೆ ಅರ್ಥದಲ್ಲಿ ಸಭೆಗೆ ಸಾಂಕೇತಿಕವಾಗಿ ಅನ್ವಯಿಸಲ್ಪಟ್ಟಿದೆ. ಸಭೆಯು “ಚೊಚ್ಚಲಾಗಿ ಹುಟ್ಟಿದವರ ಸಭೆ” ಆಗಿರುತ್ತದೆ. ಅವರಿಗೆ ಅವಕಾಶಗಳನ್ನು ಒದಗಿಸಿದ್ದಾನೆ. ಚೊಚ್ಚಲಾಗಿ ಹುಟ್ಟಿದ ಮಗನ ಇಮ್ಮಡಿ ಗೌರವಕ್ಕೆ ಹೋಲಿಕೆಯ ಗೌರವವುಳ್ಳವರಾಗಿದ್ದಾರೆ, ಆತನು ದಯಪಾಲಿಸುವ ಕೃಪೆಯು ಕ್ರಿಸ್ತನ ಸಭೆಯಂತೆ ವಿಮೋಚಿತರಿಗಿರುವ ಅತ್ಯುನ್ನತವಾಗಿ ಮೆಚ್ಚಿಕೆಯ ಸ್ಥಾನದಿಂದ ಉದ್ಭವಿಸುತ್ತದೆ; ಅದು ಪ್ರಧಾನ್ಯತೆಯ ಮೇಲೆ ಅವಲಂಭಿಸಿರುವುದಿಲ್ಲ, ಬೇರೊಬ್ಬರಿಗಿಂತ ನಾವು ಹೆಚ್ಚು ಉತ್ತಮರೆಂಬುದಾಗಿ ಕೊಡಲ್ಪಟ್ಟಿರುವುದಿಲ್ಲ; ಅದು ದೇವರ ನಿತೀನಿರ್ಣಯದ ಮುಖಾಂತರ ನಮಗೆ ಕೊಡಲ್ಪಟ್ಟ ಸ್ಥಾನದ ಮೇಲೆ ಅವಲಂಭಿಸಿರುತ್ತದೆ.

## ಸತ್ಯವು ವಿಶದವಾಗಿ ವರ್ಣಿಸಲ್ಪಟ್ಟದ್ದು

ಈ ಮಹಿಮೆಯುಳ್ಳ ಸತ್ಯವು ಹೊಸ ಒಡಂಬಡಿಕೆಯಲ್ಲಿ "ಹೊಳೆಯಲ್ಪಟ್ಟಿದೆ" ಮತ್ತು ಉದಾಹರಿಸಲ್ಪಟ್ಟಿದೆ.

*ಮುಂದೂತನಾಗಿರುವುದಕ್ಕಿಂತ ಹೆಚ್ಚು ದೊಡ್ಡದು*

ಸ್ನಾನಿಕನಾದ ಯೋಹಾನನು ಕ್ರೈಸ್ತ ಯುಗದಲ್ಲಿ ಜೀವಿಸಲಿಲ್ಲ; ಅದರ ಪರಿಣಾಮವಾಗಿ, ಅವನು ಎಂದೂ ಸಭೆಯಲ್ಲಿ ಇರಲಿಲ್ಲ. ಅವನು ದೇವರ ಅತೀ ದೊಡ್ಡ ಮನುಷ್ಯರಲ್ಲಿ ಒಬ್ಬನಾಗಿದ್ದನು, ಆದರೆ ಅವನು ಕ್ರೈಸ್ತರು ಅನುಭವಿಸುವ ಆಶೀರ್ವಾದಗಳನ್ನು ಎಂದೂ ಸ್ವೀಕರಿಸಿಕೊಳ್ಳಲಿಲ್ಲ. ಈ ಕಾರಣದಿಂದ ಯೇಸುವು ಯೋಹಾನನ ಬಗ್ಗೆ ಹೀಗೆ ಹೇಳಿದನು, "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕ ರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 11:11). ಮೆಸ್ಸೀಯನ ಬರುವಿಕೆಗಾಗಿ ಮಾರ್ಗ ಸಿದ್ಧಪಡಿಸಲು ಕೇಳಿಕೊಳ್ಳಲ್ಪಡುವುದಕ್ಕಿಂತ ಹೆಚ್ಚಿನ ಅಭಿನಂದನೆಯನ್ನು ಯಾರು ಸ್ವೀಕರಿಸಲ್ಪಡಬಹುದು? ದೇವರ ರಾಜ್ಯದಲ್ಲಿ ಇರುವದರ ಲಾಭಗಳು ಯೋಹಾನನ, ಕ್ರಿಸ್ತನ ಮುಂದೂತನ ಕೆಲಸಗಳಲ್ಲಿ ಇರುವುದಕ್ಕಿಂತ ಹೆಚ್ಚು ದೊಡ್ಡವಾಗಿದೆ ಎಂದು ಯೇಸು ಅನ್ವಯಿಸಿದನು. ಪ್ರತಿಯೊಬ್ಬ ಕ್ರೈಸ್ತನು ದೇವರ ರಾಜ್ಯದಲ್ಲಿ ಇಡಲ್ಪಡುವುದರಿಂದ ಯೋಹಾನನು ಹೊಂದಿದ್ದಕ್ಕಿಂತ ಹೆಚ್ಚಿನ ಗೌರವವನ್ನು ಹೊಂದಿದನು, ಯೋಹಾನನಿಗೆ ಕ್ರಿಸ್ತನನ್ನು ಜಗತ್ತಿಗೆ ಪರಿಚಯಿಸುವ ಅವಕಾಶವಿತ್ತು.

*ಅದ್ಭುತ ಕಾರ್ಯಗಳನ್ನು ಮಾಡುವದಕ್ಕಿಂತ ಹೆಚ್ಚು ದೊಡ್ಡದು*

ಯೇಸುವಿನ ಸೇವೆಯ ಭೂಲೋಕದ ಭಾಗದ ಸಮಯದಲ್ಲಿ, ಎಪ್ಪತ್ತು ಜನ ಶಿಷ್ಯರು ವಿವರವಾದ ನಿರ್ದೇಶನಗಳೊಂದಿಗೆ ಮಿತಿಯುಳ್ಳ ಸೇವೆಗಾಗಿ ಕಳುಹಿಸಲ್ಪಟ್ಟರು. ತಾನು ಹೋಗಲಿಕ್ಕಿದ್ದ ಪ್ರತಿಯೊಂದು ಸ್ಥಳಕ್ಕೆ ಇಬ್ಬಿಬ್ಬರನ್ನಾಗಿ "ಪೂರ್ವಭಾವಿ ಗುಂಪುಗಳಂತೆ" ಅವರನ್ನು ಕಳುಹಿಸಿದನು (ಲೂಕ 10:1). ಅದ್ಭುತ ಕಾರ್ಯಗಳನ್ನು ಮಾಡಲು ಮತ್ತು ದೆವ್ವಗಳನ್ನು ಹೊಡೆದೋಡಿಸಲು ಅವರಿಗೆ ಬಲವನ್ನೂ ಅಧಿಕಾರವನ್ನೂ ಕೊಟ್ಟನು. ಅವರು ಹಿಂದಿರುಗಿದಾಗ, ಅವರು ಹರ್ಷದಲ್ಲಿದ್ದರು, ಯೇಸುವಿನ ಹೆಸರಿನಲ್ಲಿ ಆಜ್ಞಾಪಿಸಿದಾಗ ದೆವ್ವಗಳು ಯಾರಲ್ಲಿದ್ದವೋ ಅವರಿಂದ ಹೊರಗೆ ಬಂದು ಅಧೀನವಾದವು ಎಂದು ಅವರು ಆನಂದಿಸಿದರು.

ಒಂದು ಅದ್ಭುತ ಕಾರ್ಯವನ್ನು ಮಾಡುವುದು ಹೇಗಿರುವುದೆಂಬುದನ್ನು ನಾನು ಕಲ್ಪಿಸಿಕೊಳ್ಳಲಾರೆನು, ಮರಣಕರವಾದ ರೋಗಕ್ಕೆ ಬಲಿಯಾದವನ ಬಳಿಗೆ ಹೋಗಿ, ಅವನನ್ನು ಅದ್ಭುತಕರವಾಗಿ ಗುಣಪಡಿಸಲು ಶಕ್ತರಾದದ್ದರ ಬಗ್ಗೆ ಚಿತ್ರಿಸಿಕೊಳ್ಳಿರಿ ನಿಮ್ಮ ಮೂಲಕವಾಗಿ ದೈವಿಕ ಬಲವು ಹರಿಯಿತು ಮತ್ತು ಅಂಥ ಗುಣಪಡಿಸುವಿಕೆಯನ್ನು ಮಾಡಲು ನಿಮ್ಮನ್ನು ಶಕ್ತರನ್ನಾಗಿ ಮಾಡಿತು ಎಂದು ನೀವು ಹೇಗೆ ಆನಂದಿಸುವಿರಿ; ಬೈಬಲು - ದೇವರ ಪ್ರಕಟನೆಯು ಪೂರ್ತಿಯಾಗುವದರೊಂದಿಗೆ ಅದ್ಭತಕಾರ್ಯಗಳ ಯುಗವು ಅಂತ್ಯಗೊಂಡಿತು. ಇಂದು ಅದ್ಬುತ ಕಾರ್ಯಗಳನ್ನು ಮಾಡುವ ಶಕ್ತಿಯು ಯಾರಿಗೂ ಇಲ್ಲದಿದ್ದರೂ, ಹಿಂದಿರುಗಿ ಬಂದ ಶಿಷ್ಯರು ದೆವ್ವಗಳನ್ನು ಬಿಡಿಸುವುದಕ್ಕೆ ಶಕ್ತಿಯ ಮೇಲೆ ಯಾಕೆ ಆನಂದ ಪಟ್ಟರು ಎಂಬುದನ್ನು ನಾವು ಸುಲಭವಾಗಿ ನೋಡಬಹುದು!

ಈ ಶಿಷ್ಯರು ಯೇಸುವಿಗೆ ತಮ್ಮ ಸಂತೋಷವನ್ನು ತಿಳಿಸಿದಾಗ, ಆತನು ಈ

ಅಗ್ರಾಹ್ಯವಾದ ಸೂಚನೆ ಮಾಡಿದನು: "ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವುದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡು ಮಾಡುವುದೇ ಇಲ್ಲ. *ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೇ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ*" (ಲೂಕ 10:19, 20; ಒತ್ತಿ ಹೇಳಿದ್ದು ನನ್ನದು). ಅಧ್ಭುತ ಕಾರ್ಯಗಳನ್ನು ಮಾಡುವುದಕ್ಕಿಂತ ಹೆಚ್ಚು ದೊಡ್ಡದಾಗಿರುವಂಥದ್ದರ ಮೇಲೆ ಅವನು ಕೇಂದ್ರೀಕರಿಸ ಬೇಕೆಂದು ನಮ್ಮ ಕರ್ತನು ಹೇಳಿದನೆಂದು ಬೇರೆ ಮಾತಿನಲ್ಲಿ ಹೇಳಬಹುದು. ಜೀವಬಾಧ್ಯರ ಪಟ್ಟಿಯಲ್ಲಿ ಅವರ ಹೆಸರು ಬರೆಯಲ್ಪಡುವುದು ಅಲೌಕಿಕ ಬಲದೊಂದಿಗೆ ತುಂಬಿಸಲ್ಪಡುವುದಕ್ಕಿಂತ ಹೆಚ್ಚು ದೊಡ್ಡದಾಗಿದೆ!

ಮೋಶೆಯ ಧರ್ಮಶಾಸ್ತ್ರವು ಇನ್ನೂ ಜಾರಿಯಲ್ಲಿ ಇದ್ದಾಗ ಶಿಷ್ಯರು ಜೀವಿಸಿದರು (ಇಬ್ರಿಯ 9:15-17). ಮೋಶೆಯ ಯುಗದಲ್ಲಿ ಜೀವ ಬಾಧ್ಯರ ಪಟ್ಟಿಯಲ್ಲಿ ಒಬ್ಬನ ಹೆಸರು ದಾಖಲಿಸಲ್ಪಡುವುದು, ಅದ್ಭುತಕರವಾದ ಶಕ್ತಿಯನ್ನು ರೂಢಿಸುವುದಕ್ಕಿಂತ ಹೆಚ್ಚು ದೊಡ್ಡದು ಎಂದಾಗಿದ್ದರೆ, ಕ್ರೈಸ್ತ ಯುಗದಲ್ಲಿ, ಸಮಯದ ಅಂತಿಮ ಯುಗದಲ್ಲಿ ಮತ್ತು ದೇವರ ರಕ್ಷಣೆಯ ಯೋಜನೆಯ ನೆರವೇರುವಿಕೆಯ ಯುಗದಲ್ಲಿ ಒಬ್ಬನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ದಾಖಲಿಸಲ್ಪಡುವುದು ಎಷ್ಟೋ ಹೆಚ್ಚು ಮೌಲ್ಯವುಳ್ಳದ್ದಾಗಿದೆ! ಸಭೆಯಲ್ಲಿರುವವರು, ಇಬ್ರಿಯರಿಗೆ ಬರೆದ ಪ್ರತ್ರಿಕೆಯ ಬರಹಗಾರನಂತೆ ಕ್ರೈಸ್ತ ಯುಗದಲ್ಲಿ ಪರಲೋಕದಲ್ಲಿ ತಮ್ಮ ಹೆಸರುಗಳು ದಾಖಲೆ ಹೊಂದಿದವರಾಗಿದ್ದಾರೆ. ಅವರು ಚೊಚ್ಚಲಾಗಿ ಹುಟ್ಟಿದವರ ಸಭೆ, ಅತ್ಯುನ್ನತವಾಗಿ ಮೆಚ್ಚಿಕೆ ಹೊಂದಿದವರ ಸಭೆ ಎಂದು ಉಲ್ಲೇಖಿಸಲ್ಪಟ್ಟಿದ್ದರಲ್ಲಿ ಆಶ್ಚರ್ಯವಿರುವುದಿಲ್ಲ.

*ಯಾವುದೇ ಭೂಲೋಕದ ಗೌರವದ ಪಾತ್ರಕ್ಕಿಂತ ಹೆಚ್ಚು ದೊಡ್ಡದು*

ಕುರಿಮರಿಯಾದಾತ ಜೀವಬಾಧ್ಯರ ಪುಸ್ತಕದಲ್ಲಿ ದಾಖಲಿಸಲ್ಪಡುವುದು ನಾವು ಸ್ವೀಕರಿಸಬಹುದಾದ ಇತರ ಯಾವುದೇ ಗೌರವಕ್ಕಿಂತ ಹೆಚ್ಚು ಆನಂದಕ್ಕೆ ಕಾರಣವಾಗಿದೆ. ಫಿಲಿಪ್ಪಿಯಲ್ಲಿಯ ಸುವಾರ್ತೆಯಲ್ಲಿ ಜೊತೆಕೆಲಸದವರಿಗೆ ಪೌಲನು "ಅವರವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದವೆ" (ಫಿಲಿಪ್ಪಿ 4:3) ಎಂದು ಹೇಳಿದನು. ಈ ಜಗತ್ತಿನ ಕೆಟ್ಟತನದಿಂದ ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸಾರ್ದಿಸಿನಲ್ಲಿರುವ ಸಭೆಯಲ್ಲಿಯ ಪ್ರತಿಯೊಬ್ಬರಿಗೆ, "ಜೀವಬಾಧ್ಯರ ಪಟ್ಟಿಯಿಂದ ಅವರ ಹೆಸರುಗಳನ್ನು ಅಳಿಸಿ ಬಿಡುವದಿಲ್ಲ" ಎಂದು ಯೇಸು ಹೇಳಿದನು (ಪ್ರಕಟನೆ 3:5). ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು ಎಂದು ಯೋಹಾನನು ಬರೆದನು (ಪ್ರಕಟನೆ 20:15).

ರೋಮ್ ಸಮ್ರಾಜ್ಯದ ಪಟ್ಟಣದಲ್ಲಿಯ ಅಧಿಕಾರಿಗಳು ಎಲ್ಲಾ ರೋಮನ್ ನಾಗರಿಕರ ಹೆಸರುಗಳನ್ನೊಳಗೊಂಡ ಒಂದು ಮೂಲ ಯಾದಿಯನ್ನು ಇಟ್ಟಿದ್ದರು. ಮೊದಲನೆಯ ಶತಮಾನದವರಿಗೆ, ಇಬ್ರಿಯರಿಗೆ ಪತ್ರಿಕೆ ಬರೆದವನು, ಪರಲೋಕದಲ್ಲಿ ಇಡಲ್ಪಟ್ಟ ಯಾದಿಯು ರೋಮನ್ ನಾಗರಿಕರ ಯಾದಿಗಿಂತ ಎಷ್ಟೋ ಹೆಚ್ಚು ಮಹತ್ವದ್ದಾಗಿತೆಂದು ಹೇಳಿದನು, ಆ ದಾಖಲೆಯ ಮೇಲೆ ಒಬ್ಬನು ಹೆಸರು ಕಂಡು ಬರುವಾಗ, ಅವನಿಗೆ ಎಲ್ಲಕ್ಕಿಂತ ಅತೀ ದೊಡ್ಡ ಗೌರವವಿರುವುದು, ಅದು ರಕ್ಷಿಸಲ್ಪಟ್ಟವರ ದೇವರ ಯಾದಿಯಾಗಿರುವುದು. ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಈ ಗೌರವವು ಸಭೆಗೆ ಒಳಪಟ್ಟಿದೆ ಎಂದು ಹೇಳಿದನು.

*ಹಳೇ ಒಡಂಬಡಿಕೆಯ ಗೌರವಕ್ಕಿಂತ ಹೆಚ್ಚು ದೊಡ್ಡದು*

ಇಬ್ರಿಯ 11ನೆಯ ಅಧ್ಯಾಯವು "ದೇವರಲ್ಲಿ ನಂಬಿಗಸ್ತರ ಪ್ರಸಿದ್ಧಿಯ ಅಧ್ಯಾಯ" ಎಂದು ಕರೆಯಲ್ಪಟ್ಟಿದೆ. ಹೇಬೆಲ, ಹನೋಕ, ನೋಹ, ಅಬ್ರಹಾಮ, ಸಾರಾ, ಯಾಕೋಬ, ಯೋಸೇಫ ಮತ್ತು ಮೋಶೆ ಇವರನ್ನೊಳಗೊಂಡ ಹದಿನೇಳು ಜನ ಪುರುಷರ ಮತ್ತು ಸ್ತ್ರೀಯರ ಭಾವ ಚಿತ್ರಗಳು ಈ ಮಹತ್ವದ ಅಧ್ಯಾಯದಲ್ಲಿ ಕೊಡಲ್ಪಟ್ಟಿವೆ. ಹಳೇ ಒಡಂಬಡಿಕೆಯ ಈ ವ್ಯಕ್ತಿಗಳು ಲೋಕದ ಎಲ್ಲಾ ಜನರೂ ಜ್ಞಾಪಿಸಿಕೊಳ್ಳುವುದಕ್ಕಾಗಿ ಪರಿಶುದ್ಧ ಬರಹದ ಈ ವಿಶೇಷ ಭಾಗದಲ್ಲಿ ಒಂದಾಗಿ ಇಡಲ್ಪಡುವುದಕ್ಕಾಗಿ ದೇವರಿಂದ ಆಯ್ಕೆ ಮಾಡಲ್ಪಟ್ಟಿವೆ. ಈ ನಾಯಕರಿಗೆ ಮತ್ತು ನಾಯಕಿಯರ ಬಗ್ಗೆ ಬರಹಗಾರನು ಆಶ್ಚರ್ಯಕರವಾಗಿ ಹೀಗೆ ಹೇಳಿದ್ದಾನೆ: "ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ *ಶ್ರೇಷ್ಠವಾದ ಭಾಗವನ್ನು* ಏರ್ಪಡಿಸಿ ನಾವಿಲ್ಲದೇ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು" (ಇಬ್ರಿಯ 11:39, 40). "ಶ್ರೇಷ್ಠವಾದ ಭಾಗ್ಯ" ಎಂಬುದು ಕರ್ತನ ಬರೋಣಕ್ಕೆ ಮತ್ತು ಸಭೆಗೆ ಸಂಬಂಧಿಸಿದೆ. ಚೊಚ್ಚಲ ಮಕ್ಕಳ ಸಭೆಯಂತೆ, ಇಬ್ರಿಯ 11ರ ಮಹಾ ಜನರು ನಿರೀಕ್ಷೆಯಿಂದ ಮುನ್ನೋಡಿದ ಗೌರವದೊಂದಿಗೆ ನಾವು ಆಶೀರ್ವದಿಸಲ್ಪಟ್ಟಿದ್ದೇವೆ; ಅವರು ಅದನ್ನು ವಾಸ್ತವಿಕತೆಯಂತೆ ನೋಡಲಿಲ್ಲ; ಅವರು ಅದನ್ನು ಒಂದು ವಾಗ್ದಾನದಂತೆ ಕೇವಲ ರುಚಿ ನೋಡಿದರು.

*ಭೂಲೋಕದ ಯಾವುದೇ ಸ್ಥಾನಕ್ಕಿಂತ ಹೆಚ್ಚು ದೊಡ್ಡದು*

ಚಾರ್ಲ್ಸ್ ಹೊಡ್ಜ್ ಅವರು ಒಂದು ಸಲ ಟೆನೆಸ್ಸಿಯ ನಾಶ್‌ವಿಲ್ಲೆಯಲ್ಲಿಯ ಮ್ಯಾಡಿಸನ್ ಚರ್ಚಿನಲ್ಲಿ ಮಾತಾಡುತ್ತಿದ್ದರು. ಅದು ಯುಎಸ್‌ಎ ದಲ್ಲಿಯ ಕ್ರಿಸ್ತನ ಅತಿದೊಡ್ಡ ಸಭೆಗಳಲ್ಲಿ ಒಂದಾಗಿದೆ. ಅಲ್ಲಿದ್ದಾಗ, ಅವರು ಅವರ ಕಟ್ಟಡವು ಹೇಗೆ ರೂಪಿಸಲ್ಪಟ್ಟಿದೆ ಮತ್ತು ಅದರಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡಲು ಅದರಲ್ಲೆಲ್ಲಾ ತಿರುಗಾಡಿದರು. ಅವರು ಒಂದು ಕೋಣೆಯೊಳಗೆ ನೋಡಿದರು. ಒಬ್ಬ ಪ್ರಾಯಸ್ಥ ಮಹಿಳೆ ಅಂಚೆಗೆ ಹಾಕಲು ಪತ್ರಗಳನ್ನು ಮಡಿಚುತ್ತಿದ್ದಳು. "ನೀನು ಯಾರು?" ಎಂದು ಅವರು ಪ್ರಶ್ನೆ ಮಾಡಿದರು. ಆಕೆ ಕೂಡಲೇ, "ಈ ಸಭೆಯಲ್ಲಿ ಅತೀ ಮಹತ್ವದ ವ್ಯಕ್ತಿಗಳಲ್ಲಿ ನಾನು ಒಬ್ಬಳಾಗಿದ್ದೇನೆ" ಎಂದು ಉತ್ತರಕೊಟ್ಟಳು. "ನೀನೋ? ಅದು ನಿನಗೆ ಹೇಗೆ ಗೊತ್ತು?" ಎಂದು ಹೇಳಿದರು. "ನಾನು ಹಾಗಿದ್ದೇನೆಂದು ಸಹೋದರ ನಾರ್ತ್ ಅವರು ಹೇಳಿದ್ದಾರೆ" ಎಂದು ಆಕೆ ಹೇಳಿದಳು. ಬೇರೆಯವರ ಕೆಲಸದಷ್ಟೇ ಆಕೆಯ ಕೆಲಸವು ಮಹತ್ವದ್ದಾಗಿದೆ ಮತ್ತು ಆಕೆ ಹಿರಿಯರಿಗೆ, ಡೀಕನರಂತೆ ಮತ್ತು ಪ್ರಸಂಗಿಗಳಂತೆ ಮತ್ವವುಳ್ಳವಳಾಗಿದ್ದಾಳೆ ಎಂದು ಅವರ ದೊಡ್ಡ ಪ್ರಸಂಗಿ ಇರಾ ನಾರ್ತ್ ಅವರು ಆಕೆಗೆ ಹೇಳಿದ್ದರು.

"ನೀನು ನನ್ನ ಚರ್ಚಿನೊಳಗೆ ಬರುವಾಗ, ನಿನ್ನ ಮೇಲೆ ಗೌರವ ತೋರಿ ಸುವೆನು ಮತ್ತು ಚೊಚ್ಚಲಾಗಿ ಹುಟ್ಟಿದವರ ಸಭೆ ಎಂದು ನಿನ್ನನ್ನು ಕರೆಯುವೆನು. ಸ್ನಾನಿಕನಾದ ಯೋಹಾನನಿಗೆ ನಾನು ಕೊಟ್ಟದ್ದಕ್ಕಿಂತ ಹೆಚ್ಚಿನ ಸ್ಥಾನವನ್ನು ಮತ್ತು ದೊಡ್ಡ ಕೆಲಸವನ್ನು ನಿನಗೆ ಕೊಡುವೆನು, ಕನಿಷ್ಠರಿಂದ ಹಿಡಿದುಕೊಂಡು ದೊಡ್ಡವರ ವರೆಗೆ ಎಲ್ಲರಿಗೂ ಒಂದೇ ರೀತಿಯಲ್ಲಿ ಈ ಗೌರವವನ್ನು ಕೊಡುವೆನು. ನೀನು ನನ್ನ ಸಭೆಯಲ್ಲಿದ್ದರೆ, ಸರಿಸಮಾನವಾಗಿರುವ ಮಹತ್ವದ ಸ್ಥಾನದಲ್ಲಿ ನೀನು ಇರುವಿ" ಎಂದು ದೇವರು ಹೇಳುತ್ತಾನೆ.

## ಸತ್ಯವು ಅನ್ವಯಿಸಲ್ಪಟ್ಟಿದ್ದು

ಹೊಸ ಒಡಂಬಡಿಕೆಯ ಸಭೆಯು ಚೊಚ್ಚಲ ಮಕ್ಕಳ ಸಭೆಯಾಗಿರುವುದು ಎಂಬ ಸತ್ಯವು ಸಭೆಯ ಪ್ರತಿಯೊಬ್ಬ ಸದಸ್ಯನಿಂದ ಆಗಾಧವಾದ ವೈಯಕ್ತಿಕ ಉತ್ತರವನ್ನು ಹೊರತರಬೇಕು, ಕ್ರಿಸ್ತನಿಗೆ ಮತ್ತು ಹೊರಗೆ ಮನುಷ್ಯನಿಗೆ ತಲುಪಲು ನಮ್ಮಲ್ಲಿ ಪ್ರೇರಣೆಯನ್ನುಂಟು ಮಾಡಬೇಕು, ಈ ಸತ್ಯವನ್ನು ನಾವು ಜೀವನಕ್ಕೆ ನಿರ್ದಿಷ್ಟವಾಗಿ ಹೇಗೆ ಅನ್ವಯಿಸಬೇಕು?

ಮೊದಲನೆಯದಾಗಿ, *ನಮ್ಮಲ್ಲಿ ಮಿತಿಮೀರಿದ ಕೃತಜ್ಞತೆಯಿರಲಿ.* ದೇವರು ನಮ್ಮನ್ನು ರಕ್ಷಿಸಿದ್ದಷ್ಟೇ ಅಲ್ಲ, ಆದರೆ ಅತ್ಯುನ್ನತ ಗೌರವದ ಸ್ಥಾನವನ್ನೂ ಕೊಟ್ಟಿದ್ದಾನೆ. ನಮ್ಮನ್ನು ತನ್ನ ಸಭೆಯನ್ನಾಗಿ ಮಾತ್ರವೇ ಮಾಡಿರುವುದಿಲ್ಲ, ಆದರೆ ನಮ್ಮನ್ನು ಚೊಚ್ಚಲಮಕ್ಕಳ ಸಭೆಯನ್ನಾಗಿಯೂ, ಇಮ್ಮಡಿ ಗೌರವದ ಸಭೆಯನ್ನಾಗಯೂ ಮಾಡಿದ್ದಾನೆ ಇದರ ಬೆಳಕಿನಲ್ಲಿ, "ಪ್ರತಿಯೊಂದರಲ್ಲಿ ಕೃತಜ್ಞತಾಸ್ತುತಿ ಮಾಡಿರಿ; ..." (1 ಥೆಸಲೊನೀಕ 5:18) ಎಂಬ ಪೌಲನ ಹೇಳಿಕೆಗೆ ವಿಧೇಯರಾಗುವುದು ನಮಗೆ ಕಠಿಣವಾದದ್ದಾಗಬಾರದು.

ಎರಡನೆಯದಾಗಿ, *ದೇವರ ಕೃಪೆಯನ್ನು ಇತರರಿಗೆ ವ್ಯಕ್ತಪಡಿಸುವವರಾಗಿರೋಣ.* ಆತನ ಕೃಪೆಯು ಯೇಸುವಿನಲ್ಲಿ ಪ್ರತ್ಯಕ್ಷವಾಯಿತು (ತೀತ 2:11); ಮತ್ತು ಕಡಿಮೆಯಾದ ಆದರೆ ಬಹಳ ಮಹತ್ವದ ಅರ್ಥದಲ್ಲಿ, ಆತನ ಕೃಪೆಯು ನಮ್ಮ ಮುಖಾಂತರ ನಮ್ಮ ಸುತ್ತಲಿನವರಿಗೆ ಪ್ರತ್ಯಕ್ಷವಾಗುವಂತೆ ನಾವು ಮಾಡಬೇಕು. ದೇವರು ನಮ್ಮ ಮೇಲೆ ಸುರಿಸಿದ ಅದ್ಭುತಕರವಾದ ಈ ಗೌರವವನ್ನು, ಅದನ್ನು ತಿಳಿಯದವರೊಂದಿಗೆ ಹಂಚಿಕೊಳ್ಳಲು ನಾವು ಬಯಸುತ್ತೇವೆ.

ಮೂರನೆಯದಾಗಿ, ನಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಅದ್ಭುತಕರವಾದ ಬೆಳಕಿನೊಳಗೆ ಸೇರಿಸಿದ *ದೇವರನ್ನು ಕೊಂಡಾಡೋಣ.* ಯಾಕಂದರೆ ಒಮ್ಮೆ ನಾನು ಒಂದು ಜನಾಂಗವಾಗಿರಲಿಲ್ಲ, ಆದರೆ ಈಗ ನಾವು ದೇವರ ಜನಾಂಗವಾಗಿದ್ದೇವೆ (1 ಪೇತ್ರ 2:9, 10). ಆತನ ಕೃಪೆಯ ಮಹಿಮೆಗಾಗಿ ದೇವರನ್ನು ಕೊಂಡಾಡುವುದು ಉಸಿರಾಡಿಸುವಷ್ಟು ನಮಗೆ ಸ್ವಾಭಾವಿಕವಾದದ್ದಾಗಿರಬೇಕು.

ನಾಲ್ಕನೆಯದಾಗಿ, ದೇವರ ಸ್ವಂತ ಸ್ವಾಸ್ಥ್ಯವಾಗಿರುವ ಜನಾಂಗದಂತೆ ದೇವರ ಸೇವೆಯಲ್ಲಿ *ಸತತವಾಗಿ ನಿರಂತರಾಗಿರೋಣ.* ಅಲುಗಾಡಿಸಲ್ಪಡಲಾರದಂಥ ರಾಜ್ಯವನ್ನು ನಾವು ಹೊಂದಿಕೊಂಡಿರುವುದರಿಂದ, ನಾವು ಕೃತಜ್ಞತೆಯನ್ನು ತೋರಿಸೋಣ, ಅದರಿಂದ ದೇವರಿಗೆ ಭಯಭಕ್ತಿಯಿಂದ ಸ್ವೀಕೃತವಾದ ಸೇವೆಯನ್ನು ಅರ್ಪಿಸೋಣ (ಇಬ್ರಿಯ 12:28). ನಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸೋಣ (ರೋಮಾಪುರ 12:1).

## ಮುಕ್ತಾಯ

ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನ ಪ್ರಕಾರವಾಗಿ ಹೊಸ ಒಡಂಬಡಿಕೆಯ ಸಭೆಯು ಚೊಚ್ಚಲ ಮಕ್ಕಳ ಸಭೆಯಾಗಿರುತ್ತದೆ. ದೇವರು ತನ್ನ ಸಭೆಗೆ ನಿತ್ಯವಾದ ಹಾಗೂ ಪರಲೋಕದ ಮಹಿಮೆಯನ್ನು ಕೊಟ್ಟಿದ್ದಾನೆ. ಅದು ಈ ಲೋಕದ ಹೊಗಳಿಕೆಗಳು ನಿರುಪಯೋಗಿ ಬೂದಿಯಾಗಿ ಮುರುಟುವಂತೆ ಮತ್ತು ಕಳೆಗಳು ಬಿದ್ದು ಹೋಗುವಂತೆ ಕಾರಣವಾಗುತ್ತದೆ.

ದೇವರ ಕೃಪೆಯನ್ನು ನಾವು ಕಳೆದು ಕೊಳ್ಳಬಾರದೆಂಬುದಕ್ಕೆ ಏಸಾವನ ಉದಾಹರಣೆಯಿಂದ ಬರಹಗಾರನು ಎಚ್ಚರಿಸಿದ್ದಾನೆ (ಇಬ್ರಿಯ 12:15, 16). ನಂಬಿಗಸ್ತಿಕೆಯಿಲ್ಲದೇ, ನಾವು ನಮಗಿರುವ ನಿತ್ಯವಾದ ಆಶೀರ್ವಾದಗಳನ್ನು ಕಳೆದು

ಕೊಳ್ಳಬಹುದು (1 ಪೇತ್ರ 1:10-13). ಏಸಾವನು ನಿತ್ಯತ್ವಕ್ಕಾಗಿ ಅಲ್ಲ, ಆದರೆ ಕ್ಷಣಿಕವಾದದ್ದಕ್ಕಾಗಿ ಜೀವಿಸಿದ ಪ್ರಾಪಂಚಿಕ ಮನುಷ್ಯನಾಗಿದ್ದನು.

"ಪ್ರಾಪಂಚಿಕ" ಎಂಬ ಪದವು ಮೂಲದಲ್ಲಿ ಲೌಕಿಕಕ್ಕೆ ಸಂಬಂಧಿಸಿತ್ತು. ಅದು ಲ್ಯಾಟಿನ್ ಪದ *ಪ್ರೊಫಾನಸ್* ಎಂಬುದರಿಂದ ಬರುತ್ತದೆ. ಪ್ರತಿಯೊಂದು ದೇವಾಲಯದ ಹೊರಗೆ (ಲ್ಯಾಟಿನ್: *ಫಾನುಮ್*) ಪ್ರತಿಯೊಬ್ಬರಿಗೆ ತೆರೆದ ಒಂದು ಸ್ಥಳವಿರುತ್ತಿತ್ತು. ಈ ಸ್ಥಳಕ್ಕೆ ವಿರುದ್ಧವಾಗಿ ದೇವಾಲಯದ ಸುತ್ತಲೂ ಸ್ಥಳವಿರುತ್ತಿತ್ತು, ಅದು ಪರಿಶುದ್ಧ ಭಾಗ ಎಂದು ತಿಳಿಯಲ್ಪಡುತ್ತಿತ್ತು. ತೆರೆದ ಸ್ಥಳವು ಜನರು ಕೂಡಿ ಬರುವದಕ್ಕಾಗಿದ್ದು ಪ್ರಾಪಂಚಿಕ ಭಾಗವೆಂದು ತಿಳಿಯಲ್ಪಡುತ್ತಿತ್ತು. ಏಸಾವನು ಒಬ್ಬ ಪ್ರಾಪಂಚಿಕ ಮನುಷ್ಯನಾಗಿದ್ದನು; ಅವನ ಜೀವನದಲ್ಲಿ ಪರಿಶುದ್ಧ ಜೀವಿಯಿರಲಿಲ್ಲ, ಪರಿಶುದ್ಧತೆಯಿಲ್ಲದ, ಸಾಂಧಾನಗೊಳ್ಳದ ಪ್ರಾಣವಿತ್ತು. ತನ್ನ ಚೊಚ್ಚಲತನದ ಹಕ್ಕನ್ನು ಮಾರುವುದರಲ್ಲಿ, ಅವನು ತನ್ನ ಸ್ವಭಾವವನ್ನು, ತನ್ನ ಆಂತರಿಕ ಮೌಲ್ಯಗಳನ್ನು ಪ್ರಕಟಿಸಿದನು. ನಿತ್ಯತ್ವದ ದೃಷ್ಟಿಕೋನವಿಲ್ಲದೆ ಪ್ರಾಪಂಚಿಕ ಜೀವಿಯಂತೆ ಜೀವಿಸಿದನು. ದೈಹಿಕವಾದದ್ದು ಮಾತ್ರವೇ ತನ್ನ ಪ್ರಬೋಧನೆಯಂತೆಯೂ ತನ್ನ ಅಂತ್ಯದಂತೆಯೂ ಜೀವಿಸಿದನು. ಅನಂತರದಲ್ಲಿ ಏಸಾವನು ತನ್ನ ಆಶೀರ್ವಾದವನ್ನು ಸ್ವಾಸ್ಥ್ಯವಾಗಿ ಪಡೆಯಲು ಪ್ರಯತ್ನಿಸಿದಾಗ ಅದು ಅವನಿಗೆ ಬಹಳ ತಡವಾಗಿ ಹೋಗಿತ್ತು, ತನ್ನ ಅಮೂಲ್ಯವಾದ ಅವಕಾಶಗಳನ್ನು ಬೇರೆಯವುಗಳಿಂದ ಬದಲಾಯಿಸಿಕೊಂಡಿದ್ದನು. ಮತ್ತು ಮಾನಸಾಂತರ ಪಡುವ ದಿನವು ದಾಟಿಹೋಗಿತ್ತು.

ಏಸಾವನ ಪ್ರಾಪಂಚಿಕ ಜೀವನವು ಸಭೆಯಂತೆ ನಿಮ್ಮದಾಗುವ ನಿತ್ಯ ಗೌರವದ ಮೇಲೆ ನಿಮ್ಮ ಹೃದಯವನ್ನು ಕೇಂದ್ರೀಕರಿಸುವ ಅಗತ್ಯತೆಯಿರುವುದೆಂದು ಎಚ್ಚರಿಸುತ್ತದೆ. ದೇವರ ಸ್ವಂತ ಸ್ವಾಸ್ಥ್ಯವಾಗಿ, ಚೊಚ್ಚಲಾಗಿ ಹುಟ್ಟಿದವರ ಸಭೆಯಂತೆ ಜೀವಿಸುವದರಿಂದ ಯಾವುದೂ ತಡೆಹಿಡಿಯದಿರಲಿ. ನೀವು ಮೊದಲೆಂದೂ ಗೌರವಿಸಲ್ಪಡದ ರೀತಿಯಲ್ಲಿ ನಿಮ್ಮನ್ನು ಗೌವಿರಸುವುದಕ್ಕಾಗಿ ದೇವರು ಕಾದುಕೊಂಡಿರುತ್ತಾನೆ. ಮನುಷ್ಯರು ನಾಶವಾಗುವ ಕಿರೀಟಗಳಿಂದ ನಿಮ್ಮನ್ನು ಬಹುಮಾನಿಸಬಹುದು, ಆದರೆ ದೇವರು ಈಗ ನಿಜ ಜೀವನವನ್ನೂ ಅನಂತರದಲ್ಲಿ ನಿತ್ಯ ಜೀವವನ್ನೂ ಕೊಡಬಲ್ಲನು.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಗೌರವವು ಏನಾಗಿದೆ?
2. ಬೈಬಲಿನ ಯಾವುದೇ ಪಾತ್ರದಂತೆ ಜೀವಿಸಲಿಕ್ಕೆ ನೀವು ಆಯ್ಕೆ ಮಾಡಬಹುದಾದರೆ, ನೀವು ಯಾವುದನ್ನು ಆಯ್ದುಕೊಳ್ಳವಿರಿ? ಯಾಕೆ ಎಂಬುದರ ಬಗ್ಗೆ ನಿಮ್ಮ ಕಾರಣಕೊಡಿರಿ.
3. "ನೀವು ಬಂದಿರುವಿರಿ" ಎಂಬ ಮಾತುಗಳು ಇಬ್ರಿಯ 12:22ರಲ್ಲಿ ಯಾವುದಕ್ಕೆ ಉಲ್ಲೇಖಿಸಿರುತ್ತವೆ?
4. ಕ್ರೈಸ್ತರ ಯಾವ ಸನ್ನಿವೇಶಕ್ಕೆ ಇಬ್ರಿಯರಿಗೆ ಬರೆಯಲ್ಪಟ್ಟ ಪತ್ರಿಕೆಯು ಬರೆಯಲ್ಪಟ್ಟಿತೆಂಬುದನ್ನು ವಿವರಿಸಿರಿ.
5. ನಂಬಿಗಸ್ತ ಇಸ್ರಾಯೇಲ್ಯರಿಗೆ ಇಲ್ಲದಂಥ ಯಾವ ಆಶೀರ್ವಾದಗಳು ಕ್ರೈಸ್ತರಿಗಿರುವವು, ಅವುಗಳ ಯಾದಿ ಮಾಡಿರಿ.
6. ಪರಿಶುದ್ಧ ಬರಹಗಳಲ್ಲಿ ಉಪಯೋಸಿದ "ಚೊಚ್ಚಲ ಮಕ್ಕಳು" ಎಂಬುದರ ಎರಡು ಮಾರ್ಗಗಳನ್ನು ವಿವರಿಸಿರಿ.
7. "ಚೊಚ್ಚಲ ಮಕ್ಕಳು" ಎಂಬುದು ಯೇಸುವಿಗೆ ಅನ್ವಯಿಸಿದಾಗ ಹೇಗೆ ಉಪಯೋಗಿಸಲ್ಪಟ್ಟಿದೆ?
8. "ಚೊಚ್ಚಲ ಮಕ್ಕಳು" ಎಂಬುದು ಸಭೆಗೆ ಸಂಬಂಧಿಸಿ ಹೇಗೆ ಉಪಯೋಗಿಸಲ್ಪಟ್ಟಿದೆ?
9. ಸಭೆಯಲ್ಲಿ ಕ್ರೈಸ್ತರಿಗಿರುವ ದೊಡ್ಡ ಗೌರವವನ್ನು ಬೆಳಗಿಸುವ ಉದಾಹರಣೆಗಳನ್ನು

ಕೊಡಿರಿ.

10. ಒಬ್ಬನ ಹೆಸರು ಪರಲೋಕದಲ್ಲಿ ಬರೆಯಲ್ಪಡುವುದು ಎಂಬುದರ ಅರ್ಥವನ್ನು ವಿವರಿಸಿರಿ.
11. ಇಬ್ರಿಯ 11:39, 40ರಲ್ಲಿ "ಶ್ರೇಷ್ಠ ಭಾಗ್ಯ" ಎಂಬುದನ್ನು ವಿವರಿಸಿರಿ.
12. ಕ್ರಿಸ್ತನಲ್ಲಿ ನಮ್ಮ ಮೇಲೆ ಕೊಡಲ್ಪಟ್ಟ ಗೌರವಕ್ಕೆ ನಾವು ಹೇಗೆ ಉತ್ತರ ಕೊಡಬಹುದು?

© 2009 Truth for Today